ಕುಂತಿದ್ದೇವಾ...' ಎಂದುಕೊಂಡ.

ಸೀಯೊನ್ ಇಲ್ಲದೇ ಸೋಮವಾರದ ಡೆಲಿವರಿಯೇನೋ ಆಯಿತು. ಉಳಿದವರು ಆದಿತ್ಯವಾರವೂ ಬಂದು ಅವಳ ಉಳಿದ ಕೆಲಸವನ್ನೂ ಮಾಡಬೇಕಾಯಿತು. 'ಇವಳು ಎಂತ ಸಮಯದಲ್ಲಿ ಕೆಲಸ ಬಿಡುತ್ತಿದ್ದಾಳೆ, ಇಷ್ಟುದಿನ ಅನ್ನ ಕೊಟ್ಟ ಕಂಪೆನಿಯನ್ನು ಹೇಗೆ ಜನ ಒಂದೇ ಸಮನೆ ನಿವಾಳಿಸಿಬಿಡುತ್ತಾರಲ್ಲಾ...' ಎಂದುಕೊಳ್ಳುತ್ತಾ ಅವಳ ಮ್ಯಾನೇಜರ್ ಕಡೆಗೆ ನಡೆದ. ಗುರುಪಾದ ಹತ್ತಿರ ಬರುತ್ತಿದ್ದಂತೇ ಆತನ ಮುಖದಲ್ಲಿ ಇವನು ಇದನ್ನೇ ಕೇಳಲು ಬಂದಿದ್ದಾನೆ ಎನ್ನುವುದು ಖಾತ್ರಿಯಾಗಿ ಚಿಕ್ಕದಾಗಿ ನಕ್ಕು, 'ಇನ್ನು ಎರಡು ವಾರ ಸೀಯೊನ್ ಬರುವುದು ಕಷ್ಟ, ಅವಳಿಗೆ ಇನ್ನೂ ಆರಾಮವಾಗಿಲ್ಲವಂತೆ' ಎಂದ. ಅದಕ್ಕೆ ಗುರುಪಾದ, 'ಕಂಪೆನಿ ಬಿಟ್ಟಳಾ ಮತ್ತೆ?' ಎಂದ. ಆತ ಕೇಳಿದ್ದು ಊರಲ್ಲಿ ಹುಡುಗ ಹುಡುಗಿ ಒಂದೆರಡು ದಿವಸ ಓಡಾಡಿದ ಮೇಲೆ ದೂರದಿಂದ ಗಮನಿಸಿದ ಕೆಲವರು ಹುಡುಗಿಯ ತಂದೆಯ ಹತ್ತಿರ 'ಏನು ಲವ್ವಾ?' ಎಂದು ಕೇಳುವ ತರಹ ಇತ್ತು. ಆದರೆ, ಅವಳ ಮ್ಯಾನೇಜರ್ ಮಾತ್ರ ಏನೂ ಉತ್ತರಿಸದೇ 'ಇಲ್ಲ ಇಲ್ಲ' ಎಂದಷ್ಟೇ ಉಸುರಿದ.

ಗುರುಪಾದನಿಗೂ ಅವಳಲ್ಲಿ ಮಾತನಾಡಬೇಕೆಂದೆನಿಸಲಿಲ್ಲ. ಇದೊಂದು ಸಾಂಪ್ರದಾಯಿಕ ವೈಷಮ್ಯದ ಸಮಸ್ಯೆ. ಅತ್ತೆ ಸೊಸೆಯರ ಜಗಳದಂತೆ, ಒಕ್ಕಲು ಒಡೆಯನ ಸಮಸ್ಯೆಯಂತೆ, ಮದುವೆ ಸಮಯದ ಗಂಡಿನ ಮನೆ ಹೆಣ್ಣಿನ ಮನೆಯ ಸಮಸ್ಯೆಯಂತೆ; ನಾವು ಅವರ ಮುಂದೆ ಯಾವುದಕ್ಕೂ ತಲೆ ಬಾಗಬಾರದು ಇತ್ಯಾದಿ. ಇಲ್ಲಿ ಸದಸ್ಯರೇ ಮ್ಯಾನೇಜರ್‌ನ ಹತ್ತಿರ ಹೋಗಬೇಕೆ ಹೊರತು, ಮ್ಯಾನೇಜರ್ ಅಲ್ಲ. ಇದು ರಾಜೀನಾಮೆಯ ನಂತರ ಅತ್ತೆಗೊಂದು ಕಾಲ ಸೊಸೆಗೊಂದು ಕಾಲವಾಗುತ್ತದೆ ಎನ್ನುವ ಜ್ಞಾನ ಪೂರ್ತಿ ಇದ್ದರೂ ಪದ್ಧತಿ ಬಿಡುವುದೇ? ಎನ್ನುವ ಪೊಗರಿನಿಂದ ಗುರುಪಾದ ಸುಮ್ಮನೇ ಕೂತಿದ್ದ. ಆಗಾಗ ತಾನು ಎಷ್ಟು ಕೆಳಮಟ್ಟಕ್ಕೆ ಇಳಿಯುತ್ತೇನಲ್ಲಾ ಎನ್ನುವ ಆತಂಕವೂ ಆಗುತ್ತಿತ್ತು.

ಆ ಎರಡು ವಾರಗಳಲ್ಲಿ ಆಗಾಗ ಸೀಯೊನ್ ತನ್ನ ಗಂಡ ಮತ್ತು ಮಗ ಜೊತೆಗಿರುವ, ಮಗ ಪಿಯಾನೊ ಬಾರಿಸುತ್ತಿರುವ, ಕುದುರೆಯ ಮೇಲೆ ಕುಂತು ಸವಾರಿ ಮಾಡುವ ಫೋಟೊಗಳನ್ನು ಆಗಾಗ ಗ್ರುಪ್ ಚಾಟಿನಲ್ಲಿ ಹಾಕುತ್ತಿದ್ದಳು. ಮುಂದಿನ ವಾರ ಬಂದಾಗಲೇ ಮಾತನಾಡೋಣ ಎಂದುಕೊಂಡು ತನ್ನ ಕೆಲಸದಲ್ಲಿ ತೊಡಗುತ್ತಿದ್ದ. ಮುಂದಿನ ಎರಡು ವಾರಗಳಲ್ಲಿ ಅದೇ ಪ್ರೊಜೆಕ್ಟ್‌ನ ನಂತರದ ಹಾಗು ಕೊನೆಯ ಡೆಲಿವರಿ ಇದೆಯಲ್ಲ ಎನ್ನುವ ಆತಂಕವೂ ಆಗುತ್ತಿತ್ತು.

ಸೋಮವಾರ ಬೆಳಿಗ್ಗೆ ಮೀಟಿಂಗ್ ಸಲುವಾಗಿ ಪ್ರೊಜೆಕ್ಟ್‌ನಲ್ಲಿ ಕೆಲಸ ಮಾಡುವ ಎಲ್ಲರೂ ದೊಡ್ಡ ಸ್ಕ್ರೀನ್ ಪ್ರೊಜೆಕ್ಟರ್ ಇರುವ ಮೀಟಿಂಗ್ ರೂಮಿನ ಕಡೆಗೆ ದೊಡ್ಡ ಕಾರಿಡಾರಿನಲ್ಲಿ ನಡೆದುಕೊಂಡು ಹೊಗುತ್ತಿದ್ದರೆ, ಇನ್ನೊಂದು ಕಡೆಯಿಂದ ಕೈಯಲ್ಲಿ ದೊಡ್ಡದೊಂದು ಚೀಲ ಹಿಡಿದು ಬಂದ ಸೀಯೊನ್ ಗುರುಪಾದನನ್ನು ಸಮೀಪಿಸುತ್ತಾ 'ಐ ಲಾಸ್ಟ್ ಮೈ ಬೇಬಿ... ನಾನು ನನ್ನ ಮಗು ಕಳೆದುಕೊಂಡೆ' ಎಂದು ಹೇಳಿ ಗುರುಪಾದನನ್ನು ನೋಡುತ್ತಾ ನಿಂತುಬಿಟ್ಟಳು. ಅವಳ ಮುಖದಲ್ಲಿ ಯಾವ ಲವಲವಿಕೆಯೂ ಇರಲಿಲ್ಲ. ಮುಚ್ಚಿದ ತುಟಿ ಕಂಪಿಸುತ್ತಾ ಕೆನ್ನೆಗಳು ಬಿಗಿಯಾಗಿ ತುಟಿಯೊಂದಿಗೆ ಸೇರಿದ್ದವು. ಕಣ್ಣಿಗೆ ಅಳುವೊಂದೆ ಗತಿಯಾಗಿತ್ತು. ಗುರುಪಾದ ಸೀಯೊನಳ ಮಾತು ಕೇಳುತ್ತಲೇ ಕುಸಿದು ಹೋದ. ಬಾಯಿಯಲ್ಲಿ ತನ್ನದೇ ಕನ್ನಡ ಭಾಷೆಯಲ್ಲಿ 'ಅಯ್ಯೋ ದೇವರೆ' ಎಂದ. ಅವಳೂ ಕನ್ನಡ ಕೇಳಿಸಿಕೊಂಡಳು. ಮತ್ತೆ ಮಾತನ್ನು ಮುಂದುವರಿಸಿ 'ನನ್ನನ್ನು ಕ್ಷಮಿಸು ನನ್ನನ್ನು ಕ್ಷಮಿಸು...' ಎಂದ. ಅದಕ್ಕೆ ಉತ್ತರವಾಗಿ ಅವಳು 'ಡು ನಾಟ್